

### ನಡೆ ನುಡಿಯೇ ಸುಂದರ

ಸರಳವಾದ ಉಡುಗೆ–ತೊಡುಗೆ, ಹಿತ–ಮಿತ ನಡೆ–ನುಡಿಗಳಿಂದ ಸುಂದರಿಯರಾಗಬಹುದು. ಕಪ್ಪಿದ್ದರೂ ಸುಂದರಿಯರೇ ಎಂಬುದನ್ನು ಡಾ.ಅ.ಶ್ರೀಧರರ ಲೇಖನ ಸರಿಯಾಗಿ ಹೇಳಿದೆ.

–ವಿಭಾ ಮುರಳೀಧರ್, ತುಮಕೂರು
ಬಿ.ಎಸ್.ರಮೇಶ್, ಬೆಂಗಳೂರು
ಮೊಳಕಾಲ್ಮುರು ಸುರೇಶ, ಬಳ್ಳಾರಿ
ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ

### ಯಾರು ಸುಂದರಿಯರು?

'ಬಹಿರಂಗ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯವೇ ಶಾಶ್ವತ' ಎಂಬ ಸತ್ಯವನ್ನು ಪ್ರತಿಪಾದಿಸಿರುವ ಹೆಚ್.ಎಸ್.ಪ್ರೇಮರ ಲೇಖನ ಅತ್ಯುತ್ತಮವಾಗಿದೆ.

–ಎಸ್.ವಿ. ವನಜಾಕ್ಷಮ್ಮ, ಚನ್ನಗಿರಿ

### ಒಂದು ಕ್ಷಣ ಭಯ

'ಸುಧಾ' ಮುಖಪುಟ ನೋಡಿದ ತಕ್ಷಣ ನನಗಂತೂ ಒಂಥರಾ ಗಲಿಬಿಲಿ ಉಂಟಾಯ್ತು. 40 ವರ್ಷಗಳ ಹಿಂದೆ ಮನೆ ಮುಂದೆ ಮೈಗೆಲ್ಲಾ ಬೂದಿ ಬಳಕೊಂಡು ನಾಲಿಗೆ ಮೇಲೆ ತಂತಿ ಚುಚ್ಚಿಕೊಂಡು ಬರ್‍ತಾ ಇದ್ದ ಬೂದಿ ಬುಕ್ಕಣ್ಣ ನೆನಪಿಗೆ ಬಂದು. ಭಯಗ್ರಸ್ತ ಭಾವನೆ ಜನಿಸಿ. ಮತ್ತೆ ನಕ್ಕು ಸುಮ್ಮನಾದೆ.

–ಕೆ.ಎಂ. ಮಧ್ವರಾಯ, ಬೆಂಗಳೂರು

### ಅನುಕರಣೀಯ

'ಸಂಸಾರ ಸುಖಿ ಆಗಬೇಕೆಂದರೆ...!' ಹಣವೇ ಮುಖ್ಯವಲ್ಲ. ಸಂತೃಪ್ತಿ, ಸಹನೆ ಮುಖ್ಯ ಎಂಬ ಪದ್ಮಾವತಿರಾವ್ ಲೇಖನದ ಆಶಯ ಅನುಕರಣೀಯ.

–ಬಿ.ಎಸ್.ಮುಳ್ಳೂರ, ಹಲಗತ್ತಿ

### 'ವನವಾಸಿ' ಶಿಕಾಕುಗೆ ಮೆಚ್ಚುಗೆ

ವಿಚಾರ ಲಹರಿಯಲ್ಲಿ ಶಿಕಾಕು ಅವರು 'ವನವಾಸಿ' ಶಬ್ದಕ್ಕೆ ತಮ್ಮದೇ ಆದ ರೀತಿಯಲ್ಲಿ ಅರ್ಥಪೂರ್ಣ ವ್ಯಾಖ್ಯಾನ ಮಾಡಿರುವುದು ಇಷ್ಟವಾಯಿತು.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/
ಪಿ.ಎಸ್.ಶ್ರೀವತ್ಸ, ಬೆಂಗಳೂರು

### ಶೇಕ್ಸ್‌ಪಿಯರ್ ಪಕ್ಕ ರವೀಂದ್ರ

ಬೃಂದಾ ಎಸ್. ರಾವ್ ಲೇಖನ 'ಶೇಕ್ಸ್‌ಪಿಯರನ ಮನೆ' ಕುಪ್ಪಳಿಯಲ್ಲಿನ ಕುವೆಂಪು 'ಕವಿ ಮನೆ' ನೆನಪಿಸಿತು. ವಿದೇಶಗಳಲ್ಲಿ ಕವಿ, ಕಲಾವಿದರಿಗೆ ಎಷ್ಟೊಂದು ಗೌರವ ಇದೆ ಎಂಬುದಕ್ಕೆ ಈ ಮನೆ ಸಾಕ್ಷಿ. ಶೇಕ್ಸ್‌ಪಿಯರನ ಮನೆ ಮುಂದೆ ಭಾರತೀಯ ಕವಿಋಷಿ ಠಾಗೋರರ ಪ್ರತಿಮೆ ನಿಲ್ಲಿಸಿರುವುದು ಸೋಜಿಗವೆನಿಸಿತು.

–ರಾಜಶೇಖರ ಗೌಡ, ಕೊಟ್ಟೂರು
ಎಚ್.ಆನಂದಕುಮಾರ್, ಚಿತ್ರದುರ್ಗ/ ಎಸ್.ಚನ್ನಪ್ಪ,
ಮೈಸೂರು/ ಎ.ಕೆ.ಪಟ್ಟಾಭಿ, ನೆ.ಲ.ರಾಂ,
ಬೆಂಗಳೂರು/ ಸಾಕ್ಷಿ ಶಿ.ಸತ್ಯಂಪೇಟೆ, ಗುಲ್ಬರ್ಗ

### ಅದ್ಭುತ ಸಂಶೋಧನೆ

'ಕಸದಿಂದ ರಸ' ಅನ್ನುವಂತೆ, ನಿರುಪಯೋಗಿ ಪ್ಲಾಸ್ಟಿಕ್‌ನಿಂದ ಪೆಟ್ರೋಲ್‌ನ ಸಂಶೋಧನೆ ಮಾಡಿರುವ ಪ್ರಯತ್ನ ಶ್ಲಾಘನೀಯ.

–ಎಸ್. ಪ್ರಭಾ, ಬೆಂಗಳೂರು

### ಅರ್ಥಪೂರ್ಣ ವ್ಯಂಗ್ಯಚಿತ್ರ

ಮಹ್ಮದ್ ಅವರ ತರ್ಲೆ ನನ್ಮಕ್ಕಳು ವ್ಯಂಗ್ಯಚಿತ್ರ ಅರ್ಥಪೂರ್ಣವಾಗಿತ್ತು.

–ಪ್ರಣತಿ, ಬೆಂಗಳೂರು

### ವೈ–ಚಾರಿಕ ಅಭಿನಂದನೆ

ಇತರೆ ಸುದ್ದಿ ಮಾಧ್ಯಮಗಳು ಮೌಢ್ಯ, ಕಂದಾಚಾರಗಳನ್ನು ವಿಜೃಂಭಿಸಿ ಬಿತ್ತರಿಸುವಲ್ಲಿ ಪೈಪೋಟಿಗಿಳಿದಿರುವಾಗ 'ಸುಧಾ' ಮಾತ್ರ ತನ್ನ ಘನತೆಗೆ ತಕ್ಕಂತೆ ವೈ–ಚಾರಿಯವರ ವೈಚಾರಿಕ ಲೇಖನಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯ.

–ಕೆ.ಬಿ. ರಂಗಸ್ವಾಮಿ, ತುಮಕೂರು

### ನಿಜಕ್ಕೂ ನಾವು ಯಾರು?

ಗಿರಿಧರರಾವ್ ಹವಾಲ್ದಾರ್‌ರ 'ವಿಕಲಾಂಗ ಯಾರು?' ಕಥೆ ಸಮಾಜದ ಪ್ರತಿಬಿಂಬದಂತಿತ್ತು.

–ಎಂ.ಸರ್ದಾರ್, ಅರಸೀಕೆರೆ/ ಸು.ವಿಜಯಲಕ್ಷ್ಮಿ,
ಶಿವಮೊಗ್ಗ/ ಎಂ.ಜಿ.ಆರ್.ಶೇಖರ್, ದೊಡ್ಡಬಳ್ಳಾಪುರ

### ಬೇಗ ವಾಪಸ್ ಆದ ಗಿರೀಶ್

ಡಿ. 16ರ 'ಸುಧಾ'ದಲ್ಲಿ ಕಾಸರವಳ್ಳಿ ಸಂದರ್ಶನ ಓದಿ ಆಶ್ಚರ್ಯವಾಯಿತು. 26–11–10 ರಂದು ಪಣಜಿಯ ಐನಾಕ್ಸ್ 2ರಲ್ಲಿ ಮಧ್ಯಾಹ್ನ 3.30ಕ್ಕೆ ಎರಡು ಚಿತ್ರಗಳ ಪ್ರದರ್ಶನ ಇತ್ತು. 23 ನಿಮಿಷಗಳ ಶ್ಯಾಂ ರಾತ್ ಸಹೆರ್ ನಂತರ ಗಿರೀಶರ ಚಿತ್ರದ ಪ್ರದರ್ಶನ. ಪ್ರೆಸೆಂಟೇಶನ್ ಜಂಟಿ. ಅವರು ಮಾತನಾಡಿಯೂ ಇದ್ದರು. ಚಿತ್ರೋತ್ಸವದ ದ್ವಿತೀಯಾರ್ಧದಲ್ಲಿ ಉತ್ತಮ ಚಿತ್ರಗಳು ಪ್ರದರ್ಶಿತವಾದವು. ಕಾಸರವಳ್ಳಿಯವರು ಬೇಗ ವಾಪಸ್ ಬಂದಿದ್ದಾರೆ.

'ಕನಸೆಂಬೋ...' 'ಗುಲಾಬಿ ಟಾಕೀಸ್'ಗಿಂತ ಚೆನ್ನಾಗಿತ್ತು.

–ಎಚ್ಚೆ ಸೆಮ್, ಬೆಂಗಳೂರು




ಇವರು ಕನ್ನಡ.. ಕನ್ನಡ.. ಎಂದು ಹೋರಾಟ ಮಾಡ್ತಿದ್ದವರು.. ರಾಜ್ಯೋತ್ಸವ ಪ್ರಶಸ್ತಿ ನೀಡಿ ಹೋರಾಟ ನಿಲ್ಲಿಸಿದ್ದೇವೆ..!

ಬಿಜೆಪಿ ಸರ್ಕಾರದ ಭ್ರಷ್ಟಾಚಾರಗಳು ಬಯಲಿಗೆ... ಹೀಗೆ






ಧಾರಾವಾಹಿ ಮಧ್ಯದಲ್ಲಿ ಜಾಹೀರಾತು ಬರ್‍ತಾ ಇದ್ರೆ ಸ್ವಲ್ಪ ಕೆಲ್ಸನಾದ್ರೂ ಮಾಡ್ಕೋಬಹುದಲ್ವಾ..?

ಸುಧಾ

ರಸಪ್ರಶ್ನೆ ಮೊದಲ ಡ್ರಾದ ಬಹುಮಾನ ವಿಜೇತರು

1. ಮಹಾಂತೇಶ್ ಎಚ್. ಚಿತ್ರದುರ್ಗ
2. ಜಿ. ವೆಂಕಟೇಶ ತುಮಕೂರು
3. ಶಾಲಿನಿ ವಿ. ಮೈಸೂರು
4. ಕೆ.,ಎಸ್. ತೋಯಜಾಕ್ಷಿ ದಾವಣಗೆರೆ
5. ಕೆ. ಮಧುವರ್ ಪಾಂಡವಪುರ, ಮಂಡ್ಯ
6. ರಘುನಾಥ ರಾವ್ ತಾಪ್ಸೆ ದಾವಣಗೆರೆ
7. ರಾಕೇಶ್ ಪರಾಶರ್, ಬೆಂಗಳೂರು
8. ಪ್ರವೀಣ್ ಜಿ. ಬೆಂಗಳೂರು
9. ಜಿ.ಎಂ. ಮಮತಾ, ದಾವಣಗೆರೆ
10. ಕೆ.ಆರ್.ಎಸ್. ಪ್ರಸಾದ್ ಮೈಸೂರು